# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –175 ಅಶೋಕ ಸ್ತಂಭ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಅಶೋಕ ಸ್ಥಂಭ ವಾರ್ಡ್–175 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀಮತಿ. ವರಲಕ್ಷಮ್ಮ ಎಲ್. ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆಮೇರೆಗೆ ದಿನಾಂಕ:05/11/2022 ಶನಿವಾರದಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಶ್ರೀಮತಿ. ವರಲಕ್ಷಮ್ಮ ಎಲ್. ನೋಡಲ್ ಅಧಿಕಾರಿ ರವರು.
2. ಶ್ರೀ. ಧರ್ಮಸಿಂಗ್ ಚತ್ರುನಾಯಕ್ ವಾರ್ಡ್ ಇಂಜಿನಿಯರ್.
3. ಶ್ರೀ. ಮೂರ್ತಿ, ಸಹಾಯಕ ಅಭಿಯಂತರರು, ವಿದ್ಯುತ್–ದಕ್ಷಿಣ.
4. ಡಾ॥ ಶರಣಪ್ಪ, ವೈದ್ಯಾಧಿಕಾರಿಗಳು ಜಯನಗರ.
5. ಶ್ರೀ. ವಿಜಯಕುಮಾರ್, ಕಿರಿಯ ಅಭಿಯಂತರರು ಬೆಸ್ಕಾಂ
6. ಶ್ರೀ. ರಾಜು, ಕಂದಾಯ ಪರಿವೀಕ್ಷಕರು, ಜಯನಗರ.
7. ಶ್ರೀ. ರವಿಂದ್ರ ಹಿಜೇರಿ, ಹಿರಿಯ ಆರೋಗ್ಯ ಪರಿವೀಕ್ಷಕರು.
8. ಶ್ರೀ. ವಿಜಯಕುಮಾರ್, ಕಿರಿಯ ಆರೋಗ್ಯ ಪರಿವೀಕ್ಷಕರು.
9. ಶ್ರೀ. ಜಿ.ಟಿ. ಬೊಮ್ಮೇಗೌಡ, ಕೆಲಸ ಪರಿವೀಕ್ಷಕರು ವಾರ್ಡ್–175.
10. ಶ್ರೀ. ಚನ್ನೇಗೌಡ ಎ.ಎಸ್.ಐ, ಬಸವನಗುಡಿ ಸಂಚಾರ ಪೊಲೀಸ್ ಠಾಣೆ.
11. ವಾರ್ಡ್ ಸಂಖ್ಯೆ: 175ರ ಸ್ಥಳೀಯರಾದ ಶ್ರೀ. ಕೆ.ಎಂ. ಲಕ್ಷ್ಮೀಶ, ಶ್ರೀ. ಸೋಮಶೇಖರ್, ಶ್ರೀ. ಜಯರಾಂ, ಶ್ರೀ.ರಾಜ್‌ಕುಮಾರ್. ಶ್ರೀಮತಿ. ರಾನ್ ಅಹಮದ್, ಶ್ರೀ. ಕಾಂತರಾಜು, ಶ್ರೀ. ಕೆಂಪರಾಜು, ಡಾ॥ ರಘುನಾಥ್, ಶ್ರೀಮತಿ. ಗೌರಮ್ಮ, ಶ್ರೀಮತಿ. ರತ್ನಮ್ಮ, ಶ್ರೀಮತಿ. ಎಸ್. ವಿಜಯಲಕ್ಷ್ಮೀ, ಶ್ರೀಮತಿ. ಚೆನ್ನಮ್ಮ

**ಸಭೆಗೆ ಗೈರು ಹಾಜರಾದ ಇಲಾಖೆಗಳು:–**

1. ಪೊಲೀಸ್ ಇನ್ಸ್‌ಪೆಕ್ಟರ್ ಜಯನಗರ ಸಂಚಾರ ಮತ್ತು ಕಾನೂನು ವ್ಯವಸ್ಥೆ ಪೊಲೀಸ್ ಠಾಣೆ.
2. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಬಸವನಗುಡಿ ಇಲಾಖೆಯ ಅಧಿಕಾರಿಗಳು.

*********



Scanned with CamScanner

1. ವಾರ್ಡ್-175(153) ಅಶೋಕ ಸ್ತಂಭ ವಾರ್ಡ್‌ನ ಸಾರ್ವಜನಿಕ ಕುಂದು ಕೊರತೆಗಳ ಬಗ್ಗೆ ಚರ್ಚಿಸುವ ಸಂಬಂಧ ದಿನಾಂಕ:05/11/2022 ಶನಿವಾರದಂದು ಬೆಳಗ್ಗೆ 11.00 ಗಂಟೆಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

2. ವಾರ್ಡಿನ ಸ್ಥಳೀಯರಾದ ಶ್ರೀ. ಕುಮಾರ್ ರವರು ಮಾತನಾಡಿ 9ನೇ ಮುಖ್ಯರಸ್ತೆ, ಪಾದಚಾರಿ ರಸ್ತೆಯ ಮೇಲೆ ಕಟ್ಟಿರುವ ಕೇಬಲ್‌ನ್ನು ತೆರವುಗೊಳಿಸಲು ಕೋರಿದರು.

3. ವಾರ್ಡಿನ ಸ್ಥಳೀಯರಾದ ಶ್ರೀ. ಜಯರಾಮಣ್ಣ ರವರು ಮಾತನಾಡಿ ಗುಟ್ಟೇಪಾಳ್ಯ 6ನೇ ಅಡ್ಡರಸ್ತೆಯಲ್ಲಿ ವಿದ್ಯುತ್‌ಚ್ಛಕ್ತಿ ತೊಂದರೆ ನಿವಾರಿಸುವಂತೆ ಕೋರಿದರು.

4. ಹಿಂದಿನ ಸಭೆಯಲ್ಲಿ ಎಂ.ಡಿ ಬ್ಲಾಕ್‌ನಲ್ಲಿ ಕಸದ ಸಮಸ್ಯೆ ಬಗ್ಗೆ ಚರ್ಚಿಸಿದಂತೆ ಕಸ ವಿಲೇವಾರಿ ಕಾರ್ಯ ನಿರ್ವಹಿಸಲಾಗುವುದು.

5. ವಾರ್ಡಿನ ಸ್ಥಳೀಯರಾದ ಶ್ರೀ. ಆನಂದ್ ರವರು ಮಾತನಾಡಿ ಮಾಧವನ್ ಪಾರ್ಕ್‌ನ ಸುತ್ತಮುತ್ತಲಿನ ರಸ್ತೆಯಲ್ಲಿ ಗುಂಡಿ ಮುಚ್ಚಲು ಕೋರಿದರು ಹಾಗೂ ಮಂತ್ರಿ ಮಾಲ್ ಹತ್ತಿರ ಕಸ ವಿಲೇವಾರಿ ಸರಿಯಾಗಿ ನಡೆಯುತ್ತಿಲ್ಲ ಆದ್ದರಿಂದ ಸಮಸ್ಯೆಯನ್ನು ಬಗೆಹರಿಸಲು ಕೋರಿಕೊಂಡರು. ಹಾಗೂ ಅಪೋಲೋ ಆಸ್ಪತ್ರೆ ಎದುರು ಫುಟ್‌ಪಾತ್ ಮೇಲೆ ಒತ್ತುವರಿ ತೆರವುಗೊಳಿಸಲು ಕೇಳಿಕೊಳ್ಳುತ್ತಿರುತ್ತಾರೆ.

6. ವಾರ್ಡಿನ ಸ್ಥಳೀಯರಾದ ಶ್ರೀ. ಸೋಮಶೇಖರ್ ರವರು ಮಾತನಾಡಿ ಅನಧಿಕೃತವಾಗಿರುವ ಕಟ್ಟಡಗಳಿಗೆ ನೋಟಿಸ್ ಜಾರಿಮಾಡಲು ಕೋರಿಕೊಂಡಿರುತ್ತಾರೆ.

7. ವಾರ್ಡಿನ ಸ್ಥಳೀಯರಾದ ಶ್ರೀ. ಲಕ್ಷ್ಮೀಶ ರವರು ಮಾತನಾಡಿ ಚಿಕ್ಕಣ್ಣ ಹೋಟೆಲ್‌ನವರು ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿರುವುದನ್ನು ತೆರವುಗೊಳಿಸಲು ಕೋರಿದರು. ಹಾಗೂ ಜ್ಯೂಸ್ ಜಂಕ್ಷನ್ ಎದುರು ಮರಕ್ಕೆ ಫೋಕಸ್ ಲೈಟ್ ಹಾಕಿರುವುದನ್ನು ತೆರವುಗೊಳಿಸಲು ಕೋರಿದರು.

8. ವಾರ್ಡಿನ ಸ್ಥಳೀಯರಾದ ಶ್ರೀ/ಶ್ರೀಮತಿ. ಖ್ಯಾನ್ ಅಹಮದ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಖಾಲಿ ಜಾಗಗಳಿಂದ ಜನ ಸಾಮಾನ್ಯರಿಗೆ ತೊಂದರೆಯಾಗುತ್ತಿರುವ ಬಗ್ಗೆ ಪಾಲಿಕೆ ವತಿಯಿಂದ ಕ್ರಮ ಕೈಗೊಳ್ಳಲು ಕೋರಿದರು.

9. ವಾರ್ಡಿನ ಸ್ಥಳೀಯರಾದ ಶ್ರೀ/ಶ್ರೀಮತಿ. ಖ್ಯಾನ್ ಅಹಮದ್ ರವರು ಮಾತನಾಡಿ ಎಂ.ಡಿ. ಬ್ಲಾಕ್‌ನಲ್ಲಿ ಕಸದ ಆಟೋಗಳು ಪ್ರತಿದಿನ ಕಸ ಸಂಗ್ರಹಿಸುತ್ತಿಲ್ಲವೆಂದು ದೂರಿರುತ್ತಾರೆ.

10. ವಾರ್ಡಿನ ಸ್ಥಳೀಯರಾದ ಡಾ॥ ರಘುನಾಥ್ ರವರು ಮಾತನಾಡಿ 10ನೇ "ಸಿ" 10ನೇ "ಡಿ" ಮುಖ್ಯರಸ್ತೆ ಡಾಂಬರೀಕರಣದ ಬಗ್ಗೆ ಕೇಳಿದರು. 2022-23ನೇ ಸಾಲಿನ ಕಾರ್ಯಕ್ರಮ ಪಟ್ಟಿಯಲ್ಲಿ ಸದರಿ ರಸ್ತೆಗಳು ಸೇರಿಸಿಕೊಂಡಿರುವುದನ್ನು ವಾರ್ಡಿನ ಅಭಿಯಂತರರು ತಿಳಿಸಿದರು.



Scanned with CamScanner

11. ವಾರ್ಡಿನ ಸ್ಥಳೀಯರು ಮಾತನಾಡಿ ಸೋಮೇಶ್ವರನಗರ 7ನೇ "ಡಿ" & "ಎ" ಅಡ್ಡರಸ್ತೆಯಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರು ಸರಿಯಾಗಿ ಕುಡಿಯುವ ನೀರು ಸರಬರಾಜು ಮಾಡುತ್ತಿಲ್ಲವೆಂದು ಹಾಗೂ ಕುಡಿಯುವ ನೀರು ಕಲುಷಿತವಾಗಿ ಬರುತ್ತಿದೆ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ ಎಂದು ತಿಳಿಸಿದರು.

ಮೇಲಿನ ಎಲ್ಲಾ ಅಂಶಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಹಾಜರಿದ್ದ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ತಿಳಿಸಿ ಮುಂದಿನ ಸಭೆಗೆ ಕಡ್ಡಾಯವಾಗಿ ಗೈರುಹಾಜರಾಗಿರುವ ಇತರೆ ಇಲಾಖೆಯವರು ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ತಿಳಿಸುತ್ತಾ ಸಭೆ ಮುಕ್ತಾಯಗೊಳಿಸಲಾಯಿತು.

(ಧರ್ಮಸಿಂಗ್ ಧನ್ನುನಾಯಕ್)
ಕಾರ್ಯದರ್ಶಿ
ವಾರ್ಡ್-175 ಅಶೋಕ ಸ್ತಂಭ

(ವರಲಕ್ಷ್ಮಿ ಎಲ್)
ನೋಡಲ್ ಅಧಿಕಾರಿ
ವಾರ್ಡ್-175 ಅಶೋಕ ಸ್ತಂಭ



Scanned with CamScanner